ಪ್ರಜಾವಾಣಿ

ಸೋಮವಾರ
17ನೇ ನವೆಂಬರ್ 2014

# ಬಾಲೆಗೆ ನವ ಜೀವನ

ಬೆಂಗಳೂರು: 'ಎಪಿಲೆಪ್ಸಿ ಸೀಜರ್ಸ್ ಸಮಸ್ಯೆ' (ತೀವ್ರವಾದ ಮೂರ್ಛೆ ರೋಗ), ಅನೈಚ್ಛಿಕವಾದ ಸ್ನಾಯು ಸೆಳೆತ ಹಾಗೂ ಇದ್ದಕ್ಕಿದ್ದಂತೆಯೇ ಮೂರ್ಛೆ ಹೋಗುವಂತಹ ಸಮಸ್ಯೆಗಳಿಂದ ಬಳಲುತ್ತಿದ್ದ ದುಬೈ ಮೂಲದ ಐದು ವರ್ಷದ ಸಲ್ಮಾಗೆ ನಗರದ 'ಪರಿಜ್ಞಾ ನ್ಯೂರೋ ಡಯಾಗ್ನಾಸ್ಟಿಕ್ ಮತ್ತು ರಿಹ್ಯಾಬಿಲೇಟೆಷನ್ ಸೆಂಟರ್'ನ ವೈದ್ಯರು ಚಿಕಿತ್ಸೆ ನೀಡಿ ನವ ಜೀವನ ನೀಡಿದ್ದಾರೆ.

'ನನ್ನ ಮಗಳು ಇದ್ದಕ್ಕಿಂದಂತೆಯೇ ಪ್ರಜ್ಞೆತಪ್ಪಿ ಬೀಳುತ್ತಿದ್ದುದನ್ನು ನೋಡುವುದು ನಿಜಕ್ಕೂ ಬಹಳ ಸಂಕಟವಾಗುತ್ತಿತ್ತು. ಈ ರೀತಿ ಮೂರ್ಛೆ ಬೀಳುವುದರಿಂದ ನನ್ನ ಮಗಳಿಗೆ ಆಗುತ್ತಿದ್ದ ಬಹು ಸ್ವರೂಪದ ಗಾಯಗಳನ್ನು ಕಂಡು ನನ್ನಿಂದ ಏನೂ ಮಾಡಲು ಸಾಧ್ಯವಿಲ್ಲ ಎಂಬಂತಹ ಹತಾಶ ಸ್ಥಿತಿಗೆ ತಲುಪಿದ್ದೆ' ಎಂದು ತಂದೆ ಮೊಹಮ್ಮದ್ ಹೇಳಿದರು.

ಪರಿಜ್ಞಾದ ನಿರ್ದೇಶಕ ಡಾ. ಸುರೇಶ್ ರಾವ್ ಅರೂರ್ 'ಆರಂಭದಿಂದಲೂ ಸಲ್ಮಾ ಪ್ರಕರಣವು ಸವಾಲಿನಿಂದ ಕೂಡಿತ್ತು.

ಅವಳು 'ಲೆನಾಕ್ಸ್ ಗ್ಯಾಸ್ಟೋಟ್ ಸಿಂಡ್ರೋಮ್' ನಿಂದ ಬಳಲಿದ್ದಳು ಎಂದರು.

ಸಲ್ಮಾ ಮೂರ್ಛೆ ರೋಗದಿಂದ ಸಂಪೂರ್ಣ ಗುಣಮುಖಳಾಗಿದ್ದಾಳೆ.

ಕರ್ನಾಟಕ | ಸೋಮವಾರಂ |
| 20 | 2014